# ವಿಚಿತ್ರ ಹುಡುಗಿ ಐಶಾನಿ!

**ಗುಲ್ಟು ಚಿತ್ರದ ನಾಯಕ ನವೀನ್ ಶಂಕರ್ ನಾಯಕನಾಗಿ ನಟಿಸುತ್ತಿರುವ ಚಿತ್ರವೊಂದಕ್ಕೆ ಐಶಾನಿ ಶೆಟ್ಟಿ ನಾಯಕಿ. ಈ ಚಿತ್ರ ಕಮರ್ಷಿಯಲ್ ಅಂಶಗಳನ್ನು ಹೊಂದಿದ್ದೂ ತುಂಬ ಭಿನ್ನ ರೀತಿಯ ಸಿನಿಮಾ ಎನ್ನುವುದು ಅವರ ಅಭಿಮತ.**



'ನಡುವೆ ಅಂತರವಿರಲಿ' ಚಿತ್ರದ ಮೂಲಕ ಒಂದು ಅಂತರದ ನಂತರ ಚಿತ್ರರಂಗಕ್ಕೆ ಮರುಪ್ರವೇಶ ಮಾಡಿದ್ದ ಐಶಾನಿ ಶೆಟ್ಟಿ, 'ಗಣಿ ಬಿಕಾಂ ಪಾಸ್' ಎಂಬ ಸಿನಿಮಾದಲ್ಲಿಯೂ ನಾಯಕಿಯಾಗಿ ನಟಿಸುತ್ತಿದ್ದಾರೆ. ಸೆಕೆಂಡ್ ಇನಿಂಗ್ಸ್‌ನಲ್ಲಿ ಹೆಚ್ಚು ಚ್ಯೂಸಿಯಾಗಿ, ನಟನೆಗೆ ಅವಕಾಶ ಇರುವ ಚಿತ್ರಗಳನ್ನೇ ಆಯ್ದುಕೊಳ್ಳುತ್ತೇನೆ ಎಂಬುದು ಅವರ ನಿಲುವಾಗಿತ್ತು. ಆ ನಿಲುವಿಗೆ ಪೂರಕವಾಗಿಯೇ ಅವರಿಗೆ ಇನ್ನೊಂದು ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿದೆ.

ಹೌದು, 'ಗುಲ್ಟು' ಸಿನಿಮಾದ ನಾಯಕ ನವೀನ್ ಶಂಕರ್ ನಾಯಕನಾಗಿ ನಟಿಸುತ್ತಿರುವ ಚಿತ್ರಕ್ಕೆ ಐಶಾನಿ ನಾಯಕಿ. ಇತ್ತೀಚೆಗಷ್ಟೇ ಚಿತ್ರದ ಮುಹೂರ್ತ ನೆರವೇರಿದ್ದು ಜುಲೈ ತಿಂಗಳ ಮಧ್ಯಭಾಗದಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಶ್ರೀಧರ ಷಣ್ಮುಗ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಇನ್ನೂ ಹೆಸರಿಡದ ಈ ಚಿತ್ರದ ಕುರಿತು ಐಶಾನಿಗೆ ತುಂಬಾ ನಿರೀಕ್ಷೆ ಇದೆ. ಅದು ಅವರ ಮಾತುಗಳಲ್ಲೇ ವ್ಯಕ್ತವಾಗುತ್ತದೆ. ಇದುವರೆಗೆ, ಪಕ್ಕದ್ಮನೆ ಹುಡುಗಿಯಾಗಿ, ಹರಿತ ಕಣ್ಣೋಟದ ತುಂಟಿಯಾಗಿ, ಹದಿಹರೆಯದ ತಳಮಳಗಳ ಅಭಿವ್ಯಕ್ತಿಸುವ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ಅವರಿಗೆ ಈ ಚಿತ್ರದಲ್ಲಿ ಹಿಂದಿನ ಎಲ್ಲ ಪಾತ್ರಗಳಿಗಿಂತ ತುಂಬ ಭಿನ್ನವಾದ ರೀತಿಯ ಪಾತ್ರ ಸಿಕ್ಕಿದೆಯಂತೆ. 'ಒಂಥರ ವಿಚಿತ್ರ ಹುಡುಗಿ ಅವಳು' ಎಂಬುದು ತಮ್ಮ ಪಾತ್ರದ ಕುರಿತು ಅವರ ಮೊದಲ ಮಾತು.

'ಇದೊಂದು ರೀತಿಯ ಕಲ್ಟ್ ಸಿನಿಮಾ. ಚಿತ್ರಕಥೆಯೇ ಈ ಚಿತ್ರದ ನಿಜವಾದ ನಾಯಕ. ಅಷ್ಟು ಭಿನ್ನವಾಗಿ ಮತ್ತು ಇಂಟ್ರೆಸ್ಟಿಂಗ್ ಆಗಿ ನಿರ್ದೇಶಕರು ಚಿತ್ರಕಥೆಯನ್ನು ಹೆಣೆದಿದ್ದಾರೆ. ಕನ್ನಡದಲ್ಲಿ ನಾನು ಗಮನಿಸಿದಂತೆ ಇಂಥ ಸಿನಿಮಾ ಬಂದಿಲ್ಲ. ಥ್ರಿಲ್ಲರ್ ಕಥೆಯನ್ನು ಹಾಲಿವುಡ್ ಶೈಲಿಯಲ್ಲಿ ಹೇಳಹೊರಟಿದ್ದಾರೆ. ಮುಂದೆ ಏನಾಗುತ್ತದೆ ಎಂದು ಯಾರೂ ಊಹಿಸಲು ಸಾಧ್ಯವಿಲ್ಲ. ಅಷ್ಟು ಅನಿರೀಕ್ಷಿತ ಘಟನೆಗಳು ಮೇಲಿಂದ ಮೇಲೆ ನಡೆಯುತ್ತಿರುತ್ತವೆ. ಈ ಚಿತ್ರಕಥೆಯನ್ನು ಮೆಚ್ಚಿಯೇ ನಾನು ನಟಿಸಲು ಒಪ್ಪಿಕೊಂಡಿದ್ದು' ಎನ್ನುತ್ತಾರೆ ಐಶಾನಿ.

ಕಥೆಯಷ್ಟೇ ತನ್ನ ಪಾತ್ರದ ಕುರಿತೂ ಅವರಿಗೆ ಖುಷಿಯಿದೆ. 'ಪೂರ್ಣ ಪ್ರಮಾಣದ ಕಮರ್ಷಿಯಲ್ ಸಿನಿಮಾಗಳಲ್ಲಿ ಇಂಥ ಪಾತ್ರ ಸಿಕ್ಕುವುದು ತುಂಬ ಕಷ್ಟ. ಈ ಚಿತ್ರದಲ್ಲಿ ಸಾಕಷ್ಟು ಕಮರ್ಷಿಯಲ್ ಅಂಶಗಳನ್ನು ಹೊಂದಿದ್ದೂ ಮಹತ್ವದ ವಿಷಯಗಳನ್ನು ಹೇಳಹೊರಟಿದ್ದಾರೆ. ನನ್ನ ಪಾತ್ರವೂ ಅಷ್ಟೇ ಚೆನ್ನಾಗಿದೆ. ತುಂಬ ಕಷ್ಟದ ಬಾಲ್ಯವನ್ನು ಕಳೆದಿರುವ ಹುಡುಗಿ. ಆ ಅನುಭವಗಳ ಮೂಲಕವೇ ಅವಳ ವ್ಯಕ್ತಿತ್ವವೂ ರೂಪುಗೊಂಡಿರುತ್ತದೆ. ಯಾವುದೇ ಭಿಡೆ ಇಲ್ಲದೆ ಮನಸ್ಸಿಗೆ ಅನಿಸಿದ್ದನ್ನು ನೇರವಾಗಿ ಹೇಳುವವಳು. ತನ್ನ ಸುತ್ತಲಿನ ಜಗತ್ತನ್ನು ತುಂಬ ಭಿನ್ನವಾಗಿ ಗ್ರಹಿಸುವ ಹುಡುಗಿ ಅವಳು' ಎಂದು ಪಾತ್ರದ ಕುರಿತು ಅವರು ವಿವರಣೆ ನೀಡುತ್ತಾರೆ.

'ಗುಲ್ಟು ಸಿನಿಮಾದ ನಾಯಕ ನವೀನ್ ಶಂಕರ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ನಮ್ಮಿಬ್ಬರ ಕಾಂಬಿನೇಷನ್ ಜನರಿಗೆ ಇಷ್ಟವಾಗುತ್ತದೆ ಎಂಬ ನಂಬಿಕೆ ಇದೆ. ನಿರ್ದೇಶಕರು ಒಂದೊಂದು ಪಾತ್ರಗಳನ್ನೂ ಪ್ರತ್ಯೇಕವಾಗಿ ಪೋಸ್ಟರ್ ಮೂಲಕ ಪರಿಚಯಿಸುವ ಯೋಜನೆ ಹಾಕಿಕೊಂಡಿದ್ದಾರೆ. ಮೊದಲಿಗೆ ನವೀನ್ ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ಬಿಡುಗಡೆ ಮಾಡಲಾಗಿದೆ. ಮುಂದೆ ನನ್ನ ಪಾತ್ರ ಇಂಟ್ರಡ್ಯೂಸ್ ಮಾಡುವ ಪೋಸ್ಟರ್ ಬಿಡುಗಡೆಯಾಗುತ್ತದೆ. ತುಂಬ ಡಿಫರೆಂಟ್ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಕೊಂಚ ಕಾಯಿರಿ' ಎಂದು ಕುತೂಹಲದ ಒಗ್ಗರಣೆಯನ್ನು ಹಾಕಿ ನಗುತ್ತಾರೆ ಐಶಾನಿ. ಓಂಕಾರ್ ಮತ್ತು ಪ್ರಶಾಂತ್ ಅಂಜನ್ ಈ ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ. ರೋಣದ ಬಗ್ಗೇಶ್ ಮತ್ತು ಕಾರ್ತಿಕ್ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಕೀರ್ತನ್ ಪೂಜಾರಿ ಛಾಯಾಗ್ರಹಣದ ಹೊಣೆ ಹೊತ್ತಿದ್ದಾರೆ. ಬೆಂಗಳೂರು ಮತ್ತು ಮಂಗಳೂರಿನಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆಯಂತೆ.

ಚಿತ್ರ: ಎಂ.ಎಸ್. ಮಂಜುನಾಥ್